ಆ. ಬಂದಿದ್ದಲ್ಲಿ ಅನುಮೋದನೆ ನೀಡಲಾಗಿದೆಯೇ?

ಇ. ನೀಡಿದ್ದಲ್ಲಿ ಮುಂದಿನ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸಲಾಗುವುದೇ?

ಪ್ರೊ. ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ. ಆ) ಕೆ.ಆರ್. ನಗರ ತಾಲ್ಲೂಕಿನಲ್ಲಿ ಈಗಾಗಲೇ 8 ಸರ್ಕಾರಿ ಹಾಗೂ 3 ಖಾಸಗಿ ಪದವಿ ಪೂರ್ವ ಕಾಲೇಜುಗಳು ಇರುತ್ತವೆ. ಇದಲ್ಲದೆ ಚುಂಚನಕಟ್ಟೆ ಗ್ರಾಮದಿಂದ ಕೇವಲ 5 ಕಿ.ಮೀ. ದೂರದ ಕೆಸ್ತೂರು ಕೊಪ್ಪಲು ಗ್ರಾಮದಲ್ಲಿ 1 ಸರ್ಕಾರಿ ಪದವಿ ಪೂರ್ವ ಕಾಲೇಜು ಇರುತ್ತದೆ. ಆದುದರಿಂದ ಚುಂಚನಕಟ್ಟೆ ಗ್ರಾಮಕ್ಕೆ ಪದವಿಪೂರ್ವ ಕಾಲೇಜು ಮಂಜೂರು ಮಾಡುವ ಅವಶ್ಯಕತೆ ಇರುವುದಿಲ್ಲ.

ಇ. ಪ್ರಶ್ನೆ ಉದ್ಭವಿಸುವುದಿಲ್ಲ.

ಮೈಸೂರು ಜಿಲ್ಲಾ ಪಂಚಾಯತ್‌ನಲ್ಲಿ ರಸ್ತೆ ನಿರ್ವಹಣಾ ಅನುದಾನ

1449(1562) ಶ್ರೀ ಬಸವರಾಜು ಹೆಚ್.ಸಿ (ಪಿರಿಯಾಪಟ್ಟಣ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಮೈಸೂರು ಜಿಲ್ಲಾ ಪಂಚಾಯತ್‌ನಲ್ಲಿ 2002-03 ನೇ ಸಾಲಿನಲ್ಲಿ ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ನಿಗಧಿಪಡಿಸಿರುವ ರಸ್ತೆ ನಿರ್ವಹಣಾ ಅನುದಾನ ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)

2. ಅನುದಾನ ಬಿಡುಗಡೆ ಮಾಡಿಲ್ಲದಿದ್ದಲ್ಲಿ ಕಾರಣ ಏನು;

3. ಕಳೆದ ಹಲವಾರು ವರ್ಷಗಳಿಂದ ರಸ್ತೆಗಳ ಅಭಿವೃದ್ಧಿಗಾಗಿ ಸರ್ಕಾರವು ಕೋಟ್ಯಾಂತರ ರೂಪಾಯಿ ಖರ್ಚು ಮಾಡಿದ್ದು, ನಿರ್ವಹಣೆಗೆ ಅನುದಾನ ಲಭ್ಯವಿಲ್ಲದೆ ರಸ್ತೆಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

4. ಬಂದಿದ್ದಲ್ಲಿ, ಆ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ;

5. ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಜಿಲ್ಲಾ ಪಂಚಾಯತಿಗೆ ಸೇರಿದೆ ರಸ್ತೆಗಳ ವಿಸ್ತೀರ್ಣ ಎಷ್ಟು;

6. ಇದರಲ್ಲಿ ಡಾಂಬರೀಕರಣವಾದ ರಸ್ತೆಗಳೆಷ್ಟು; ಮೆಟಲಿಂಗ್ ಆಗಿರುವ ವಿಸ್ತೀರ್ಣ ಎಷ್ಟು? (ರಸ್ತೆಗಳ ವಿವರ ನೀಡುವುದು)

ಶ್ರೀ ಎಮ್. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

1. ಮೈಸೂರು ಜಿಲ್ಲೆ ಕೆ.ಆರ್. ನಗರ ವಿಭಾಗಕ್ಕೆ ಈ ಕೆಳಕಂಡಂತೆ ರಸ್ತೆ ನಿರ್ವಹಣಾ ಅನುದಾನ ನಿಗದಿಪಡಿಸಲಾಗಿದೆ.

1. ಕೆ.ಆರ್. ನಗರ	ರೂ. 60.85 ಲಕ್ಷಗಳು
2. ಹುಣಸೂರು	ರೂ. 51.40 ಲಕ್ಷಗಳು
3. ಪಿರಿಯಾಪಟ್ಟಣ	ರೂ. 52.69 ಲಕ್ಷಗಳು
4. ಹೆಚ್.ಡಿ. ಕೋಟೆ	ರೂ. 43.73 ಲಕ್ಷಗಳು

2. ಪ್ರಸ್ತಕ್ತ ಸಾಲಿನಲ್ಲಿ ಈವರೆಗೆ ಮೈಸೂರು ಜಿಲ್ಲಾ ಪಂಚಾಯತ್‌ಗೆ ರೂ. 186.16 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಕೆ.ಆರ್.ನಗರ ವಿಭಾಗಕ್ಕೆ ರೂ. 84.40 ಲಕ್ಷಗಳನ್ನು ಜಿಲ್ಲಾ ಪಂಚಾಯತ್ ಒದಗಿಸಿದೆ.

3. ರಸ್ತೆ ನಿರ್ವಹಣೆಗಾಗಿ ಸರ್ಕಾರವು ಪ್ರತಿ ವರ್ಷ ಯೋಜನೇತರ ಲೆಕ್ಕ ಶೀರ್ಷಿಕೆ 3054 ರಲ್ಲಿ ಅನುದಾನವನ್ನು ಜಿಲ್ಲಾ ಪಂಚಾಯತಿಗಳಿಗೆ ಒದಗಿಸಿದ್ದು ಈ ವರ್ಷ ಮೈಸೂರು ಜಿಲ್ಲಾ ಪಂಚಾಯತ್‌ಗೆ ಪ್ರಸ್ತುತ ಸಾಲಿನಲ್ಲಿ ರೂ. 186.16 ಲಕ್ಷಗಳ ಅನುದಾನವನ್ನು ಒದಗಿಸಿದೆ.

4. ಉದ್ಭವಿಸುವುದಿಲ್ಲ.

5. 607.6 ಕಿ.ಮೀ.

6. ಡಾಂಬರೀಕರಣಗೊಂಡ ರಸ್ತೆ ಉದ್ದ: 148.80 ಕಿ.ಮೀ. ಮೆಟಲಿಂಗ್ ಆದ ರಸ್ತೆ ಉದ್ದ: 473.55 ಕಿ.ಮೀ.

ರಾಜ್ಯದಲ್ಲಿ ಚಿತ್ರಕಲಾ ಶಿಕ್ಷಕರ ಹುದ್ದೆಗಳ ಭರ್ತಿ

1450 (1851) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ): ಮಾನ್ಯ ಪ್ರಾಥಮಿಕ ಮತ್ತು ಪ್ರೌಡ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿ ಎಷ್ಟು ಜನ ನಿರುದ್ಯೋಗಿ ಚಿತ್ರಕಲಾವಿದ ಅಭ್ಯರ್ಥಿಗಳಿದ್ದಾರೆ?

ಆ. ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಶಾಲೆಗಳಲ್ಲಿ ಎಷ್ಟು ಚಿತ್ರಕಲಾ ಶಿಕ್ಷಕ ಹುದ್ದೆಗಳು ಖಾಲಿ ಇದೆ? ಹಾಗದರೆ ಖಾಲಿ ಇರುವ ಹುದ್ದೆಗಳನ್ನು ಯಾವಾಗ ತುಂಬಲಾಗುವುದು?

ಇ. ಮಕ್ಕಳ ಪ್ರತಿಭೆಗೆ ಅನುಗುಣವಾಗಿ ವಿವಿಧ ಲಲಿತ ಕಲೆಗಳ ಶಿಕ್ಷಣ ನೀಡುವುದು ಸರ್ಕಾರದ ಕರ್ತವ್ಯವಲ್ಲವೇ? ಆದರಲ್ಲಿ ಚಿತ್ರಕಲಾ ಶಿಕ್ಷಣ ಮಹತ್ವದ್ದು ಎಂದು ಸರ್ಕಾರ ಪರಿಗಣಿಸುವುದೇ?

ಈ. ಈ ರಾಜ್ಯದಲ್ಲಿ ಸರ್ಕಾರದ ಅನುದಾನ ಪಡೆಯುವ ಎಷ್ಟು ಚಿತ್ರಕಲಾ ಶಾಲೆಗಳು ಇವೆ? ಪ್ರತಿ ವರ್ಷ ಪದವಿ ಪಡೆದು (ತರಬೇತಿ) ಹೊರಬರುವವರ ಸಂಖ್ಯೆ ಎಷ್ಟು? (ಸಂಸ್ಥೆಯ ಹೆಸರಿನೊಂದಿಗೆ ವಿವರ ಒದಗಿಸುವುದು?

ಶ್ರೀ ಬ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ. ರಾಜ್ಯದಲ್ಲಿ 4511 ನಿರುದ್ಯೋಗಿ ಚಿತ್ರ ಕಲಾವಿದ ಅಭ್ಯರ್ಥಿಗಳಿರುತ್ತಾರೆ.

ಆ. ಪ್ರಾಥಮಿಕ ಶಾಲೆಗಳ ಬಗ್ಗೆ

ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ 223 ಚಿತ್ರಕಲಾ ಶಿಕ್ಷಕರ ಹುದ್ದೆಗಳು ಖಾಲಿ ಇರುತ್ತವೆ. ಸದರಿ ಚಿತ್ರಕಲಾ ಶಿಕ್ಷಕರ ಹುದ್ದೆಗಳನ್ನು ನೇಮಕಾತಿ ಮಾಡುವ ಸಂಬಂಧವಾಗಿ ಅನುಮತಿ ನೀಡಿದ್ದು, ಈಗಾಗಲೇ ಪ್ರಕ್ರಿಯೆ ಆರಂಭಿಸಿದ್ದು, ನೇಮಕಾತಿಗಾಗಿ ಅಧಿಸೂಚನೆ ಹೊರಡಿಸುವ ಹಂತದಲ್ಲಿದೆ. ಶೀಘ್ರದಲ್ಲೇ 223 ಚಿತ್ರಕಲಾ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

ಪ್ರೌಢ ಶಾಲೆಗಳ ಬಗ್ಗೆ.

ಸರ್ಕಾರಿ ಪ್ರೌಢ ಶಾಲೆಗಳಲ್ಲಿ 60 ಚಿತ್ರಕಲಾ ಶಿಕ್ಷಕರ ಹುದ್ದೆಗಳು ಖಾಲಿ ಇರುತ್ತವೆ. ಈ ಹುದ್ದೆಗಳನ್ನು ಮುಂದಿನ ಶೈಕ್ಷಣಿಕ ವರ್ಷ ಪ್ರಾರಂಭಕ್ಕೆ ಮುನ್ನಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.